94

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ (ದಕ್ಷಿಣ ಪದವೀಧರ ಚುನಾವಣಾ ಕ್ಷೇತ್ರ), ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಸೂಚನೆ:**

ರೈತರ ಆತ್ಮಹತ್ಯೆ, ಬಣವೆ ನಷ್ಟ, ಆಕಸ್ಮಿಕ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಆಯಾಯ ಆರ್ಥಿಕ ವರ್ಷದಲ್ಲೇ ಪರಿಹಾರ ಪಾವತಿಸುವಂತೆ ಆರ್ಥಿಕ ಇಲಾಖೆ ಹೊರಡಿಸಿರುವ ಆದೇಶವು ಹಲವು ಕುಟುಂಬಗಳಿಗೆ ಸಂಕಷ್ಟ ತಂದಿದೆ. ಈ ಆದೇಶದ ಪರಿಣಾಮ 2019-20, 2021-22, 2022-23, 2023-24 ಸಾಲುಗಳಲ್ಲಿ ಸಂಭವಿಸಿದ ಮೇಲ್ಕಂಡ ಮರಣ/ ನಷ್ಟದ ಪ್ರಕರಣಗಳಲ್ಲಿ ಪರಿಹಾರ ಪಾವತಿಯಾಗದೇ ನನೆಗುದಿಗೆ ಬಿದ್ದಿರುತ್ತದೆ. ಪರಿಹಾರ ಸಿಗದ ಕುಟುಂಬಗಳು ಸರ್ಕಾರಿ ಕಚೇರಿಗೆ ಅಲೆಯುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಈ ರೀತಿಯ 14 ಪ್ರಕರಣಗಳಿದ್ದರೆ ರಾಜ್ಯದ ಇತರೆ ಜಿಲ್ಲೆಗಳಲ್ಲೂ ಇಂತಹ ಪ್ರಕರಣಗಳಿದ್ದು ವಿಲೇಗೆ ಬಾಕಿ ಉಳಿದಿರುತ್ತವೆ. ರಾಜ್ಯದ ಎಲ್ಲಾ ಜಿಲ್ಲೆಗಳೂ ಸೇರಿದರೆ ಪರಿಹಾರ ಪಾವತಿಸಲು ಬಾಕಿ ಉಳಿದಿರುವ ಪ್ರಕರಣಗಳು ಕನಿಷ್ಠ ಸಂಖ್ಯೆಯಲ್ಲಿರಬಹುದು. ಈ ಹಿಂದೆ, ಆರ್ಥಿಕ ಇಲಾಖೆಯ ಸಹಮತಿ ಮೇರೆಗೆ ಬೆಳಗಾವಿ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿನ ಹಿಂದಿನ ಸಾಲುಗಳ (2019-20, 2021-22 & 2022-23 ನೇ ಸಾಲಿನ) ಪ್ರಕರಣಗಳಲ್ಲಿ ಪರಿಹಾರ ಪಾವತಿಸಲಾಗಿದೆ. ಹಾಗಾಗಿ, ಮಂಡ್ಯ ಸೇರಿದಂತೆ ಉಳಿದ ಜಿಲ್ಲೆಗಳಲ್ಲಿರುವ ಈ ರೀತಿಯ ಹಿಂದಿನ ಬಾಕಿ ಪ್ರಕರಣಗಳನ್ನು '**ವಿಶೇಷ ಪ್ರಕರಣ**'ಗಳೆಂದು ಪರಿಗಣಿಸಿ 'ಒಂದು ಬಾರಿಯ ಇತ್ಯರ್ಥ'ಪಡಿಸುವ ಷರತ್ತಿನೊಂದಿಗೆ ವಿಲೇಗೊಳಿಸಬೇಕಿರುತ್ತದೆ. ಆರ್ಥಿಕ ಇಲಾಖೆಯು ಈ ಬಗ್ಗೆ ಸಹಮತಿಯ ಆದೇಶ ಹೊರಡಿಸುವುದರ ಜೊತೆಗೆ ಅನುದಾನವನ್ನು ನೀಡಿದರೆ ಕೆಲವು ವರ್ಷಗಳಿಂದ ಬಾಕಿ ಉಳಿದಿರುವ ಪ್ರಕರಣಗಳು ಇತ್ಯರ್ಥಗೊಂಡು ಸಂಕಷ್ಟದಲ್ಲಿರುವ ಅನ್ನದಾತನ ಕುಟುಂಬಗಳಿಗೆ ನೆರವಾಗಲಿದೆ. ಹಾಗಾಗಿ, ಈ ಕುರಿತ ಗಂಭೀರ ಸಮಸ್ಯೆಯ ಬಗ್ಗೆ ನಿಯಮ 72ರ ಅಡಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆದಿರುತ್ತಾರೆ.

**ಉತ್ತರ:**

ರೈತರ ಆತ್ಮಹತ್ಯೆ, ಬಣವೆ ನಷ್ಟ, ಆಕಸ್ಮಿಕ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಅರ್ಹ ಫಲಾನುಭವಿಗಳಿಗೆ ಪರಿಹಾರ ನೀಡಲಾಗುತ್ತಿದೆ. ಇಂತಹ ಪ್ರಕರಣಕ್ಕೆ ಸರ್ಕಾರದಿಂದ ನೀಡಲಾಗುತ್ತಿರುವ ಪರಿಹಾರವು ಸಕಾಲದಲ್ಲಿ ಫಲಾನುಭವಿಗಳಿಗೆ ಪಾವತಿಸುವ ಸಂಬಂಧ ಆಯಾಯ ಆರ್ಥಿಕ ವರ್ಷದಲ್ಲೇ ಪರಿಹಾರಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕೆಂದು ಆರ್ಥಿಕ ಇಲಾಖೆಯು ಷರತ್ತು/ನಿಬಂಧನೆಗಳನ್ನು ವಿಧಿಸಲಾಗಿದೆ. ಆದರೂ ಕೆಲವು ಕಾರಣಗಳಿಂದ ಆಯಾ ವರ್ಷದಲ್ಲಿ ಪರಿಹಾರವನ್ನು ಪಾವತಿಸಲು ಸಾಧ್ಯವಾಗದ ಪ್ರಕರಣಗಳನ್ನು ಸೂಕ್ತ ಸಮರ್ಥನೆಯೊಂದಿಗೆ ಆರ್ಥಿಕ ಇಲಾಖೆಗೆ ಸಲ್ಲಿಸಿದ್ದಲ್ಲಿ, ಅಂತಹ ಪ್ರಸ್ತಾವನೆಯನ್ನು ಪರಿಶೀಲಿಸಿ ಆರ್ಥಿಕ ಇಲಾಖೆಯ ಅನುಮೋದನೆ ನೀಡಲಾಗುತ್ತಿದೆ.

**ಸಂಖ್ಯೆ: ಆಇ 878 ವೆಚ್ಚ-7 2025 (ಇ)**

(ಸಿದ್ದರಾಮಯ್ಯ)
ಮುಖ್ಯಮಂತ್ರಿ